**ಕರ್ನಾಟಕ ವಿಧಾನ ಪರಿಷತ್ತು**
**ನೂರ ಐವತ್ತೈದನೆಯ ಅಧಿವೇಶನ**

# ಕರ್ನಾಟಕ ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ, 2025

**(2025ರ ವಿಧಾನಸಭೆಯ ವಿಧೇಯಕ ಸಂಖ್ಯೆ–26)**

**(ಕರ್ನಾಟಕ ವಿಧಾನಸಭೆಯಿಂದ ಅಂಗೀಕಾರವಾದ ರೂಪದಲ್ಲಿ)**

ಕರ್ನಾಟಕ ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ ಅಧಿನಿಯಮ, 1956ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ ಅಧಿನಿಯಮ, 1956 (1957ರ ಕರ್ನಾಟಕ ಅಧಿನಿಯಮ 5) ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ (ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೆ ಜಾರಿಗೆ ಬರತಕ್ಕದ್ದು.

**2. ಪ್ರಕರಣ 3ರ ತಿದ್ದುಪಡಿ.-** ಕರ್ನಾಟಕ ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ ಅಧಿನಿಯಮ, 1956 (1957ರ ಕರ್ನಾಟಕ ಅಧಿನಿಯಮ 5)(ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 3ನೇ ಪ್ರಕರಣದಲ್ಲಿ,-

(i) "ಎಪ್ಪತ್ತೈದು ಸಾವಿರ ರೂಪಾಯಿಗಳ" ಎಂಬ ಪದಗಳ ಬದಲಿಗೆ "ಒಂದು ಲಕ್ಷದ ಐವತ್ತು ಸಾವಿರ ರೂಪಾಯಿಗಳ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) "ಅರವತ್ತು ಸಾವಿರ ರೂಪಾಯಿಗಳ" ಎಂಬ ಪದಗಳ ಬದಲಿಗೆ "ಒಂದು ಲಕ್ಷದ ಇಪ್ಪತ್ತೈದು ಸಾವಿರ ರೂಪಾಯಿಗಳ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(iii) "ನಾಲ್ಕು ಲಕ್ಷ ಐವತ್ತು ಸಾವಿರ ರೂಪಾಯಿಗಳ" ಎಂಬ ಪದಗಳ ಬದಲಿಗೆ "ಐದು ಲಕ್ಷ ರೂಪಾಯಿಗಳ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

**3. ಪ್ರಕರಣ 4ರ ತಿದ್ದುಪಡಿ.-** ಮೂಲ ಅಧಿನಿಯಮದ 4ನೇ ಪ್ರಕರಣದ, (1)ನೇ ಉಪಪ್ರಕರಣದಲ್ಲಿ, “ಒಂದು ಲಕ್ಷದ ಇಪ್ಪತ್ತು ಸಾವಿರ ರೂಪಾಯಿಗಳ” ಎಂಬ ಪದಗಳ ಬದಲಿಗೆ “ಎರಡು ಲಕ್ಷದ ಐವತ್ತು ಸಾವಿರ ರೂಪಾಯಿಗಳ” ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

**4. ಪ್ರಕರಣ 6ಎ ರ ತಿದ್ದುಪಡಿ.-** ಮೂಲ ಅಧಿನಿಯಮದ 6ಎ ಪ್ರಕರಣದಲ್ಲಿ, “ಐವತ್ತು ಸಾವಿರ ರೂಪಾಯಿಗಳ” ಎಂಬ ಪದಗಳ ಬದಲಿಗೆ “ಎಪ್ಪತ್ತೈದು ಸಾವಿರ ರೂಪಾಯಿಗಳ” ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

**5. ಪ್ರಕರಣ 6ಬಿ ರ ತಿದ್ದುಪಡಿ.-** ಮೂಲ ಅಧಿನಿಯಮದ 6ಬಿ ಪ್ರಕರಣದ, (1)ನೇ ಉಪಪ್ರಕರಣದಲ್ಲಿ, “ಒಂದು ಲಕ್ಷದ ಇಪ್ಪತ್ತು ಸಾವಿರ ರೂಪಾಯಿಗಳ” ಎಂಬ ಪದಗಳ ಬದಲಿಗೆ “ಎರಡು ಲಕ್ಷ ರೂಪಾಯಿಗಳ” ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

**6. ಪ್ರಕರಣ 9ಬಿ ನ್ನು ಬಿಟ್ಟುಬಿಡುವುದು.-** ಮೂಲ ಅಧಿನಿಯಮದ 9ಬಿ ಪ್ರಕರಣವನ್ನು ಬಿಟ್ಟುಬಿಡತಕ್ಕದ್ದು.

ಈ ವಿಧೇಯಕವು ಭಾರತ ಸಂವಿಧಾನದ 199ನೇ ಅನುಚ್ಛೇಧದ ಅರ್ಥವ್ಯಾಪ್ತಿಯ ಮೇರೆಗೆ ಒಂದು ಧನ ವಿಧೇಯಕವೆಂದು ಪ್ರಮಾಣೀಕರಿಸುತ್ತೇನೆ.

**ಸಭಾಧ್ಯಕ್ಷರು**
ಕರ್ನಾಟಕ ವಿಧಾನಸಭೆ

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**(ವಿಧೇಯಕವನ್ನು ಮಂಡಿಸುವಾಗ ಲಗತ್ತಿಸಿದಂತೆ)**

ಪ್ರಸ್ತುತ ಜೀವನ ನಿರ್ವಹಣಾ ವೆಚ್ಚದಲ್ಲಿ ಸಾಕಷ್ಟು ಹೆಚ್ಚಳವಾಗಿದೆ. ಮುಖ್ಯಮಂತ್ರಿಗಳ, ಮಂತ್ರಿಗಳ, ರಾಜ್ಯ ಮಂತ್ರಿಗಳ ಮತ್ತು ಉಪ ಮಂತ್ರಿಗಳ ಸಂಬಳ ಮತ್ತು ಭತ್ಯೆಗಳನ್ನು ದೀರ್ಘ ಕಾಲದಿಂದ ಪರಿಷ್ಕರಿಸಿರುವುದಿಲ್ಲ. ಆದ್ದರಿಂದ, ಸಂಬಳ, ಮನೆಬಾಡಿಗೆ ಭತ್ಯೆ, ಆತಿಥ್ಯ ಭತ್ಯೆ, ವಾಹನ ಭತ್ಯೆಗಳು ಇತ್ಯಾದಿಗಳ ಪರಿಷ್ಕರಣೆಗಾಗಿ ಕರ್ನಾಟಕ ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ ಅಧಿನಿಯಮ, 1956ನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮದಿಂದ ವಾರ್ಷಿಕವಾಗಿ ಅಂದಾಜು ಹತ್ತು ಕೋಟಿ ರೂಪಾಯಿಗಳ ಆವರ್ತಕ ಹೆಚ್ಚುವರಿ ವೆಚ್ಚ ಉಂಟಾಗುತ್ತದೆ.

**ಸಿದ್ದರಾಮಯ್ಯ**
ಮುಖ್ಯಮಂತ್ರಿ

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

**ಅನುಬಂಧ**

**ಕರ್ನಾಟಕ ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ ಅಧಿನಿಯಮ, 1956**

**(1957ರ ಕರ್ನಾಟಕ ಅಧಿನಿಯಮ 5) ರ ಉದ್ಧೃತ ಭಾಗ**

**XX XX XX**

**3. ಮುಖ್ಯಮಂತ್ರಿ ಮತ್ತು ಮಂತ್ರಿಗಳ ಸಂಬಳಗಳು.-** ಮುಖ್ಯಮಂತ್ರಿಗೆ ಒಂದು ತಿಂಗಳಿಗೆ ಎಪ್ಪತ್ತೈದು ಸಾವಿರ ರೂಪಾಯಿಗಳ ಸಂಬಳ ಮತ್ತು ಪ್ರತಿಯೊಬ್ಬ ಮಂತ್ರಿಗೆ ಒಂದು ತಿಂಗಳಿಗೆ ಅರವತ್ತು ಸಾವಿರ ರೂಪಾಯಿಗಳ ಸಂಬಳವನ್ನು ಸಂದಾಯ ಮಾಡತಕ್ಕದ್ದು. ಅವರಿಗೆ ಒಂದು ವರ್ಷಕ್ಕೆ ನಾಲ್ಕು ಲಕ್ಷ ಐವತ್ತು ಸಾವಿರ ರೂಪಾಯಿಗಳ ಆತಿಥ್ಯ ಭತ್ಯೆಯನ್ನು ಕೂಡಾ ಸಂದಾಯ ಮಾಡತಕ್ಕದ್ದು.

**XX XX XX**

**4. ಮಂತ್ರಿಗಳಿಗೆ ವಾಸದ ಮನೆಗಳು.-** (1) ಪ್ರತಿಯೊಬ್ಬ ಮಂತ್ರಿಯು, ಬೆಂಗಳೂರು ನಗರದಲ್ಲಿ ತಮ್ಮ ಅಧಿಕಾರಾವಧಿ ಇರುವ ತನಕ ಮತ್ತು ನಿಕಟ ತರುವಾಯದ ಅರವತ್ತು ದಿನಗಳ ಅವಧಿಯವರೆಗೆ ಸುಸಜ್ಜಿತ ನಿವಾಸವನ್ನು ಬಳಸಲು ಅಥವಾ ಅಂಥ ಸುಸಜ್ಜಿತ ನಿವಾಸದ ಬದಲಿಗೆ ಪ್ರತಿ ತಿಂಗಳು ಒಂದು ಲಕ್ಷದ ಇಪತ್ತು ಸಾವಿರ ರೂಪಾಯಿಗಳ ದರದಲ್ಲಿ ಮನೆ ಬಾಡಿಗೆ ಭತ್ಯೆಯನ್ನು ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು. ಈ ಉಪಪ್ರಕರಣದ ಅಡಿಯಲ್ಲಿ ಒದಗಿಸಲಾದ ನಿವಾಸವನ್ನು ಗೊತ್ತುಪಡಿಸಬಹುದಾದದ ಅಂಥ ಪ್ರಮಾಣದಲ್ಲಿ ಸಜ್ಜುಗೊಳಿಸತಕ್ಕದ್ದು ಮತ್ತು ಅದರ ಮೇಲುಪಾಯದ ಒಟ್ಟು ವಿಸ್ತೀರ್ಣವು ಅಂಥ ಪರಿಮಿತಿಗಳನ್ನು ಮೀರತಕ್ಕದ್ದಲ್ಲ.

(2) ಸುಸಜ್ಜಿತ ನಿವಾಸಕ್ಕೆ ಬದಲಾಗಿ ಮನೆ ಬಾಡಿಗೆ ಭತ್ಯೆಕ್ಕೆ ಹಕ್ಕುಳ್ಳ ಮಂತ್ರಿಗಳು ಬಳಸುವ ನಿವಾಸದಲ್ಲಿ, ಅಧಿಕೃತ ಉದ್ದೇಶಗಳ ಬಳಕೆಗಾಗಿ, ನಿಯಮಿಸಲಾದ ಅಂಥ ಅಳತೆಯಲ್ಲಿ ರಾಜ್ಯ ಸರ್ಕಾರವು ಮೂರು ಕೋಣೆಗಳನ್ನು ಸುಸಜ್ಜಿತಗೊಳಿಸತಕ್ಕದ್ದು. ಅವರು ಪ್ರತಿ ತಿಂಗಳು, ನಿವಾಸದ ನಿರ್ವಹಣೆ ಮತ್ತು ಸ್ವಚ್ಛತೆಗಾಗಿ ಮತ್ತು ಅಂಥ ನಿವಾಸದಲ್ಲಿ ಇರುವ ತೋಟಗಳ ವಿನ್ಯಾಸ ಮತ್ತು ನಿರ್ವಹಣೆಗಾಗಿ ಮೂವತ್ತು ಸಾವಿರ ರೂಪಾಯಿಗಳ ಭತ್ಯೆಗೆ ಹಕ್ಕುಳ್ಳವರಾಗಿರತಕ್ಕದ್ದು.

**XX XX XX**

**6ಎ. ರಾಜ್ಯ ಮಂತ್ರಿಗಳ ಸಂಬಳಗಳು.-** ಪ್ರತಿಯೊಬ್ಬ ರಾಜ್ಯ ಮಂತ್ರಿಗೆ ಪ್ರತಿ ತಿಂಗಳಿಗೆ ಐವತ್ತು ಸಾವಿರ ರೂಪಾಯಿಗಳ ಸಂಬಳವನ್ನು ಮತ್ತು ಪ್ರತಿ ತಿಂಗಳಿಗೆ ಮೂರು ಲಕ್ಷ ರೂಪಾಯಿಗಳ ಆತಿಥ್ಯ ಭತ್ಯೆಯನ್ನು ಸಂದಾಯ ಮಾಡತಕ್ಕದ್ದು.

**XX XX XX**

**6ಬಿ. ರಾಜ್ಯ ಮಂತ್ರಿಗಳ ನಿವಾಸಗಳು.-** (1) ಪ್ರತಿಯೊಬ್ಬ ರಾಜ್ಯ ಮಂತ್ರಿಯು ಅವನ ಪದಾವಧಿಯಲ್ಲಿ ಮತ್ತು ನಿಕಟೋತ್ತರದ ಅರವತ್ತು ದಿನಗಳ ಅವಧಿಯವರೆಗೆ ಬೆಂಗಳೂರು ನಗರದಲ್ಲಿ ಸುಸಜ್ಜಿತ ನಿವಾಸವನ್ನು ಬಳಸಲು ಅಥವಾ ಅಂಥ ಸುಸಜ್ಜಿತ ನಿವಾಸಕ್ಕೆ ಬದಲಾಗಿ ಪ್ರತಿ ತಿಂಗಳಿಗೆ ಒಂದು ಲಕ್ಷದ ಇಪ್ಪತ್ತು ಸಾವಿರ ರೂಪಾಯಿಗಳ ದರದಲ್ಲಿ ಮನೆ ಬಾಡಿಗೆ ಭತ್ಯೆಯನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು. ಈ ಉಪಪ್ರಕರಣದ ಅಡಿಯಲ್ಲಿ ಒದಗಿಸಲಾದ ನಿವಾಸವನ್ನು ಗೊತ್ತುಪಡಿಸಬಹುದಾದದ ಅಂಥ ಪ್ರಮಾಣದಲ್ಲಿ ಸಜ್ಜುಗೊಳಿಸತಕ್ಕದ್ದು ಮತ್ತು ಅದರ ಮೇಲುಪಾಯದ ಒಟ್ಟು ವಿಸ್ತೀರ್ಣವು ಅಂಥ ಪರಿಮಿತಿಗಳನ್ನು ಮೀರತಕ್ಕದ್ದಲ್ಲ.

(2) ಸುಸಜ್ಜಿತ ನಿವಾಸಕ್ಕೆ ಬದಲಾಗಿ ಮನೆ ಬಾಡಿಗೆ ಭತ್ಯೆಕ್ಕೆ ಹಕ್ಕುಳ್ಳ ರಾಜ್ಯ ಮಂತ್ರಿಯು ಬಳಸುವ ನಿವಾಸದಲ್ಲಿ, ಅಧಿಕೃತ ಉದ್ದೇಶಗಳ ಬಳಕೆಗಾಗಿ, ನಿಯಮಿಸಲಾದ ಅಂಥ ಅಳತೆಯಲ್ಲಿ ರಾಜ್ಯ ಸರ್ಕಾರವು ಮೂರು ಕೋಣೆಗಳನ್ನು ಸುಸಜ್ಜಿತಗೊಳಿಸತಕ್ಕದ್ದು. ಅವರು ಪ್ರತಿ ತಿಂಗಳು, ನಿವಾಸದ ನಿರ್ವಹಣೆ ಮತ್ತು ಸ್ವಚ್ಛತೆಗಾಗಿ ಮತ್ತು ಅಂಥ ನಿವಾಸದಲ್ಲಿ ಇರುವ ತೋಟಗಳ ವಿನ್ಯಾಸ ಮತ್ತು ನಿರ್ವಹಣೆಗಾಗಿ ಮೂವತ್ತು ಸಾವಿರ ರೂಪಾಯಿಗಳ ಭತ್ಯೆಗೆ ಹಕ್ಕುಳ್ಳವರಾಗಿರತಕ್ಕದ್ದು.

**XX XX XX**

**9ಬಿ. ಮುಖ್ಯಮಂತ್ರಿ, ಮಂತ್ರಿ, ರಾಜ್ಯ ಮಂತ್ರಿ ಮತ್ತು ಉಪಮಂತ್ರಿಗಳ ಸಂಬಳ ಮತ್ತು ಭತ್ಯೆಗಳಲ್ಲಿ ಹೆಚ್ಚಳ.-** ಮುಖ್ಯಮಂತ್ರಿ, ಮಂತ್ರಿ, ರಾಜ್ಯ ಮಂತ್ರಿ ಮತ್ತು ಉಪಮಂತ್ರಿಗಳ ಸಂಬಳ ಮತ್ತು ಭತ್ಯೆಗಳನ್ನು ಆದಾಯ ತೆರಿಗೆ ಅಧಿನಿಯಮ, 1961ರ 48ನೇ ಪ್ರಕರಣದ ವಿವರಣೆಯ ಖಂಡ (v)ರ ಅಡಿಯಲ್ಲಿ ಉಪಬಂಧಿಸಲಾದ ಬೆಲೆ ಏರಿಕೆ ಸೂಚ್ಯಂಕದ ಆಧಾರದ ಮೇಲೆ 2023ರ ಏಪ್ರಿಲ್ 1ನೇ ದಿನಾಂಕದಿಂದ ಪ್ರಾರಂಭವಾಗಿ ಪ್ರತಿ ಐದು ವರ್ಷಗಳ ತರುವಾಯ ಹೆಚ್ಚಳ ಮಾಡತಕ್ಕದ್ದು.

**XX XX XX**

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಕಾಸೂ , ಪ್ರತಿಗಳು 300, 20ನೇ ಮಾರ್ಚ್ 2025

**KARNATAKA LEGISLATIVE COUNCIL**

**ONE HUNDRED AND FIFTY FIFTH SESSION**

# THE KARNATAKA MINISTERS SALARIES AND ALLOWANCES (AMENDMENT) Bill, 2025

**(LA Bill No. 26 of 2025)**

**(As passed by the Karnataka Legislative Assembly)**

A Bill further to amend the Karnataka Ministers Salaries and Allowances Act, 1956.

Whereas, it is expedient further to amend the Karnataka Ministers Salaries and Allowances Act, 1956 (Karnataka Act 5 of 1957) for the purposes hereinafter appearing;

Be it enacted by the Karnataka State Legislature in the Seventy-sixth year of the Republic of India as follows:-

**1. Short title and commencement.-** (1) This Act may be called the Karnataka Ministers Salaries and Allowances (Amendment) Act, 2025.

(2) It shall come into force at once.

**2. Amendment of section 3.-** In the Karnataka Ministers Salaries and Allowances Act, 1956 (Karnataka Act 5 of 1957), (hereinafter referred to as the Principal Act), in section 3,-

(i) for the words "seventy five thousand rupees" the words, " one lakh fifty thousand rupees", shall be substituted;

(ii) for the words "sixty thousand rupees" the words, " one lakh twenty five thousand rupees", shall be substituted; and

(iii) for the words "four lakhs fifty thousand rupees" the words, " five lakhs rupees", shall be substituted.

**3. Amendment of section 4.-** In section 4 of the Principal Act, in sub-section (1), for the words "one lakh twenty thousand rupees", the words, " two lakh fifty thousand rupees", shall be substituted; and

**4. Amendment of section 6A**.- In section 6A of the Principal Act, for the words "fifty thousand rupees" the words, " seventy five thousand rupees", shall be substituted.

**5. Amendment of section 6B.-** In section 6B of the Principal Act, in sub-section (1), for the words "one lakh twenty thousand rupees", the words, " two lakh rupees", shall be substituted.

**6. Omission of section 9B.-** Section 9B of the Principal Act shall be omitted.

I hereby certify that this Bill is Money Bill within the meaning of Article 199 of the Constitution of India.

**SPEAKER**

Karnataka Legislative Assembly

## STATEMENT OF OBJECTS AND REASONS

**(As appended to at the time of Introduction)**

There is a considerable increase in the cost of living. The salary and allowances to the Chief Minister, Ministers, Ministers of State and Deputy Ministers have not been revised since a long time. Therefore, it is considered necessary to amend the Karnataka Ministers Salaries and Allowances Act, 1956 for revision of salary, house rent allowance, sumptuary allowance.

Hence, the Bill.

## FINANCIAL MEMORANDUM

There will be a recurring approximate additional expenditure of Rupees ten crores per annum from the proposed legislative measure.

**SIDDARAMAIAH**
Chief Minister

**K.R. MAHALAKSHMI**
Secretary
Karnataka Legislative Council

## ANNEXURE

### EXTRACT FROM THE KARNATAKA MINISTERS SALARIES AND ALLOWANCES ACT, 1956. (KARNATAKA ACT 5 OF 1957)

**XX XX XX**

**3. Salaries of Chief Minister and Ministers.-** There shall be paid to the Chief Minister a salary of seventy five thousand rupees per mensem and to each Minister a salary of sixty thousand rupees per mensem. They shall also be paid a sumptuary allowance of four lakhs fifty thousand rupees per annum.

**XX XX XX**

**4. Residences of Ministers.-** (1) Each Minister shall be entitled, to the use of a furnished residence in the City of Bangalore throughout his term of office and for a period of sixty days immediately thereafter, or in lieu of such furnished residence to a house rent allowance at the rate of one lakh twenty thousand rupees per mensem. The residence provided under this sub-section shall be furnished on such scales, and the plinth area thereof shall not exceed such limits, as may be prescribed.

(2) In a residence used by a Minister who is entitled to a house rent allowance in lieu of a furnished residence, three rooms shall be furnished by the State Government on such scales as may be prescribed, to be used for official purposes. He shall be entitled for an allowance of thirty thousand rupees per month for maintenance and upkeep of residence and for layout and maintenance of gardens included in such residence.

**XX XX XX**

**6A. Salaries of Ministers of State.-** There shall be paid to each Minister of State a salary of fifty thousand rupees per mensem and a sumptuary allowance of three lakhs rupees per annum.

**XX XX XX**

**6B. Residences of Ministers of State.-** (1) Each Minister of State shall be entitled, to the use of a furnished residence in the City of Bangalore throughout his term of office and for a period of sixty days immediately thereafter, or in lieu of such furnished residence to a house rent allowance at the rate of one Lakh twenty thousand rupees per mensem. The residence provided under this sub-section shall be furnished on such scales, and the plinth area thereof shall not exceed such limits, as may be prescribed.

(2) In a residence used by a Minister of State who is entitled to a house rent allowance in lieu of a furnished residence, three rooms shall be furnished by the State Government on such scales as may be prescribed, to be used for official purposes. He shall be entitled for an allowance of thirty thousand rupees per month for maintenance and up keep of residence and for layout and maintenance of gardens included in such residence.

**XX XX XX**

**9B. Increase in Salary and Allowances of the Chief Minister, the Minister, the Minister of State and the Deputy Minister.-** The salary and allowances of the Chief Minister, the Minister, the Minister of State and the Deputy Minister shall be increased after every five years commencing from 1st April, 2023 on the basis of Cost Inflation Index provided under clause (v) of Explanation to section 48 of the Income-tax Act, 1961.

**XX XX XX**

Govt. Press, Vikasa Soudha, Bengalur, 20th Mar, 2025, P7, W.D. , Copies 300